ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರು ಡಿಸೆಂಟ್ರಲೈಜ್ ಮಾಡಿರುವುದು ಇಂಥಾದ್ದನ್ನೇ. ಬಾಕಿ ಇರುವುದನ್ನು ಸೆಂಟ್ರಲೈಸ್ ಮಾಡಿಕೊಂಡರು.

ಶ್ರೀ ಬಸವರಾಜ್ ಪಾಟೀಲ್ .—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನಿಮಗೆ ನಾನು ಅವಕಾಶ ಕೊಡುವುದಿಲ್ಲ. ಶ್ರೀ ಯಂಕಾ ನಾಯಕ್ ಅವರೇ ನೀವು ಪ್ರಶ್ನೆ ಕೇಳಿ.

ಶ್ರೀ ಬಸವರಾಜ್ ಪಾಟೀಲ್,—ಅಧ್ಯಕ್ಷರೇ.....

ಅಧ್ಯಕ್ಷರು.—ನಿಮಗೆ ಅವಕಾಶ ಇಲ್ಲ. ಶ್ರೀ ಯೆಂಕಾನಾಯಕ್ ಅವರನ್ನು ನಾನು ಕರೆದಿದ್ದೇನೆ ಶ್ರೀ ಬಸವರಾಜ್ ಪಾಟೀಲ್ ಅವರು ಏನೇ ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಹರಪನ ಹಳ್ಳಿಯಲ್ಲಿ ಅಗ್ನಿ ಶಾಮಕದಳ ಇಲ್ಲದಿರುವುದು

೧೭೩. ಶ್ರೀ ಬಿ. ಹೆಚ್. ಯಂಕನಾಯಕ (ಹರಪನ ಹಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಅಗ್ನಿಶಾಮಕದಳವಿಲ್ಲದೆ ಅನೇಕ ತೊಂದರೆಗಳು ಉದ್ಭವಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಹಿಂದೆ ಅಗ್ನಿ ದುರಂತ ಸಂಭವಿಸಿದಾಗ ಹೊಸಪೇಟೆಯಿಂದ ಅಗ್ನಿ ಶಾಮಕದಳದವರು ಬರುವುದು ವಿಳಂಬವಾಗಿ ಮತ್ತಷ್ಟು ದುರಂತಕ್ಕೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಹರಪನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಅಗ್ನಿ ಶಾಮಕದಳದ ಉಪಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹಮಂತ್ರಿ).—

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

೧೨-೦೦ ಮಧ್ಯಾಹ್ನ

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಬಳ್ಳಾರಿ ಹೊಸಪೇಟೆ, ಸಂಡೂರುಗಳಲ್ಲಿ ಫೈರ್ ಸ್ಟೇಷನ್‌ಗಳಿವೆ. ಬೆಂಗಳೂರು ಜಿಲ್ಲೆಯನ್ನು ಬಿಟ್ಟರೆ ಇದೇ ಜಿಲ್ಲೆಯಲ್ಲಿ ಜಾಸ್ತಿ ಇರುವುದು. ಹರಪನಹಳ್ಳಿಯಿಂದ ದಾವಣಗೆರೆ ೫೦ ಕಿ.ಮೀ. ಹರಪನಹಳ್ಳಿಯಿಂದ ಹೊಸಪೇಟೆಗೆ ೮೦ ಕಿ.ಮೀ. ಇದೆ. ನಾವು ಎಲ್ಲಾ ಕಡೆ ಈ ಫೈರ್ ಸ್ಟೇಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ, ಹರಪನಹಳ್ಳಿಯಿಂದ ಹೊಸಪೇಟೆಗೆ ೮೦ ಕಿ.ಮೀ. ಇದೆ. ನಾನು ಈಗ್ಗೆ ೩-೪ ವರ್ಷಗಳಿಂದಲೂ ಇದನ್ನು ಕೇಳುತ್ತಿದ್ದೇನೆ. ಇಲ್ಲಿಯ ಜನಗಳಿಗೆ ಬಹಳ ತೊಂದರೆಯಾಗಿದೆ. ಸಂಡೂರು ಕೂಡ ೭೫ ಕಿ. ಮೀ. ದೂರ ಇದೆ. ಅಲ್ಲಿಂದ ಅಗ್ನಿ ಶಾಮಕದಳದವರು ಬರುವ ಹೊತ್ತಿಗೆ ಮನೆಗಳು ನಾಶವಾಗುತ್ತವೆ. ನಾನು ಹಿಂದೆ ೧೯೮೪-೮೫ ರಲ್ಲೂ ಇದರ ಬಗ್ಗೆ ಪ್ರಶ್ನೆ ಹಾಕಿದಾಗ, ಮಾನ್ಯ ಮಂಖ್ಯಮಂತ್ರಿಗಳು ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೂ ಇಲ್ಲಿ ಫೈರ್ ಸ್ಟೇಷನ್ ಆಗಿಲ್ಲ. ದಾವಣಗೆರೆಗೆ ಫೋನ್ ಮಾಡಿದರೆ, ಅಲ್ಲಿಂದ ಡಿ. ಐ ಜಿ. ಫೋನ್ ಮಾಡಿ, ಅಲ್ಲಿಂದ ಅಗ್ನಿಶಾಮಕದಳದವರು ಬರುವ ಹೊತ್ತಿಗೆ ಇಲ್ಲಿ ಹಳ್ಳಿಗಳು ನಾಶವಾಗುತ್ತವೆ. ಹೊಸಪೇಟೆಯಿಂದ ಅಗ್ನಿಶಾಮಕದಳದವರು ಬರುವ ಹೊತ್ತಿಗೂ ಇಲ್ಲಿ ಮನೆಗಳು, ಗುಡಿಸಲುಗಳು ನಾಶವಾಗುತ್ತವೆ. ಆದುದರಿಂದ ದಯವಿಟ್ಟು ಇಲ್ಲಿ ಫೈರ್ ಸ್ಟೇಷನ್ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಈಗಾಗಲೇ ಹೇಳಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಫೈರ್ ಸ್ಟೇಷನ್‌ಗಳನ್ನು ಮಾಡುವುದಕ್ಕೆ ಹಲವಾರು ಕಾರಣಗಳಿಂದ ಸಾಧ್ಯವಾಗುತ್ತಿಲ್ಲ. ಮುಂದೆ ಇದರ ಅವಶ್ಯಕತೆ ಬಂದಾಗ ನೋಡೋಣ.

ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಯಲ್ಲಿ ಸೊಳ್ಳೆ ಹಾವಳಿ

೧೯೦. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಯ ಸುತ್ತಮುತ್ತಲ ಪ್ರದೇಶದಲ್ಲಿ ಸೊಳ್ಳೆಕಾಟ ಜಾಸ್ತಿಯಾಗಿ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಜನರ ತೊಂದರೆಯನ್ನು ನಿವಾರಿಸುವಲ್ಲಿ ಸರ್ಕಾರದವರು ಕೈಗೊಂಡಕ್ರಮ ಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಈ ಪ್ರದೇಶದಲ್ಲಿ ಮಲೇರಿಯಾ ಖಾಯಿಲೆಯು ಕೇಂದ್ರ ಸರ್ಕಾರದ ನಿಗದಿಪಡಿಸಿರುವ ಮಟ್ಟದಲ್ಲಿ ಅಂದರೆ ಅನ್ಯುಯಲ್ ಪ್ಯಾರಾಸೈಟಿಕ್ಸ್ ಇಂಡೆಕ್ಸ್ ಎರಡು ಮತ್ತು ಮೇಲ್ಪಟ್ಟು ಇಲ್ಲ ಆದರೂ ಸಹ ರೋಗ ಪತ್ತೆ ಹಚ್ಚಲು ಕೇಂದ್ರ ಸರ್ಕಾರದ ನಿಬಂಧನೆಗಳಿಗನುಗುಣವಾಗಿ ಪ್ರತಿ ೧೫ ದಿವಸ ಗಳಿಗೊಮ್ಮೆ ಸಾರ್ವಜನಿಕ ರಕ್ತ ಲೇಪನಗಳನ್ನು ಸಂಗ್ರಹಿಸಿ ಪರೀಕ್ಷೆ ಮಾಡಲಾಗುತ್ತಿದೆ. ಈ ಪ್ರದೇಶ ದಲ್ಲಿ ರೋಗ ಪ್ರಕರಣಗಳು ಪತ್ತೆಯಾಗಿಲ್ಲ ರೋಗ ಪ್ರಕರಣಗಳು ಪತ್ತೆಯಾದಾಗ ಮಾತ್ರ ಮನೆಗಳಿಗೆ ಔಷಧಿ ಸಿಂಪರಣಾ ಕ್ರಮ ಕೈಗೊಳ್ಳಲಾಗುವುದು.

ಗ್ರಾಮದ ಪಕ್ಕದಲ್ಲಿ ಬೆಂಗಳೂರಿನ ಉತ್ತರ ಭಾಗ ಹಾಗೂ ಹೆಬ್ಬಾಳ ಪಶುವೈದ್ಯ ಶಾಲಾ ಕಾಲೇಜು ಕಡೆಗಳಿಂದ ಚರಂಡಿ ನೀರು ಹರಿದು ಬರುತ್ತದೆ. ಇದು ಪಕ್ಕದ ನಾಗಾವರ ಕಡೆಗೆ ಸೇರುತ್ತದೆ. ಈ ನೀರನ್ನು ಚೋಳನಾಯ್ಕ ಹಳ್ಳಿಯ ಗ್ರಾಮಸ್ಥರು ಈ ಚರಂಡಿಗೆ ಅಡ್ಡಗಟ್ಟು ಹಾಕಿ ಈ ನೀರನ್ನು ಗದ್ದೆ ಅಥವಾ ತೋಟಗಳಿಗೆ ಉಪಯೋಗಿಸುತ್ತಿದ್ದುದು ಕಂಡು ಬಂದಿದೆ. ಇದರಿಂದಾಗಿ ಚರಂಡಿ ನೀರು ಸಂಲಲಿತವಾಗಿ ಹರಿದು ಹೋಗದೆ ಅಲ್ಲಲ್ಲಿ ನಿಂತು ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಇದಕ್ಕೆ ಬೆಂಗಳೂರು ನೀರು ಸರಬರಾಜು ಮಂಡಳಿ ಹಾಗೂ ಜನಾರೋಗ್ಯ ಇಂಜಿನಿಯರ್ ಇಲಾಖೆಯವರು ಕ್ರಮ ಕೈಗೊಂಡರೆ ಸೊಳ್ಳೆಗಳಿಂದ ಹರಡುವ ಖಾಯಿಲೆಗಳು ಬಹುಮಟ್ಟಿಗೆ ಕಡಿಮೆಯಾಗುವ ಸಂಭವ ವಿದೆ.

ಮಳೆ ಬಿದ್ದರೆ ಸೊಳ್ಳೆಗಳು ಕಡಿಮೆಯಾಗುತ್ತವೆ. ಮಳೆ ಇಲ್ಲದೇ ಇರುವುದರಿಂದ ಸ್ವಲ ಜಾಸ್ತಿ ಯಾಗಿದೆ. ಮಲೇರಿಯಾ ಖಾಯಿಲೆ ಹರಡತಕ್ಕದ್ದು ಸೊಳ್ಳೆಗಳು ಅಲ್ಲವೆಂದು ತಿಳಿದು ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಮಲೇರಿಯಾ ಸೊಳ್ಳೆ ಎಂದು ಹೇಳಲಿಲ್ಲ. ಕಾಟ ಸಿಕ್ಕಾಪಟ್ಟೆ ಇದೆ. ಈ ವಿಷಯವನ್ನು ಅಲ್ಲಿನ ಜನರೇ ಹೇಳಿದ್ದಾರೆ. ಇದು ಮಾನ್ಯ ಬಸವಲಿಂಗಪ್ಪನವರ ಕ್ಷೇತ್ರ ಅಲ್ಲಿರತಕ್ಕ ಜನರಿಗೆ ಇದೇ ಒಂದು ಗೋಳು ಆಗಿದೆ. ಹೆಬ್ಬಾಳ ಪಶು ವೈದ್ಯ ಶಾಲಾ ಕಾಲೇಜು ಕಡೆಗಳಿಂದ ಚರಂಡಿ ನೀರು ಹರಿದು ಬರುತ್ತದೆ ಎಂದು ತಾವು ಹೇಳಿದ್ದೀರಿ. ಈ ಚರಂಡಿಯ ನೀರನ್ನು ಪ್ರತ್ಯೇಕವಾಗಿ ಹರಿದುಹೋಗಬೇಕೆಂದು ಇರುವಾಗ. ನೀವು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಈ ನೀರನ್ನು ಆ ಗ್ರಾಮದ ಜನರು ಗದ್ದೆಗೆ ಉಪಯೋಗಿ ಸುತ್ತಿದ್ದಾರೆಂಬ ವಿಷಯ ತಿಳಿದಿರಬಹುದು. ಆದರೆ ಇದು ಕಾನೂನಿಗೆ ವಿರುದ್ಧವಾಗಿದೆ. ನೀವು ಇದನ್ನೇ ಮುಂದುವರಿಸಿಕೊಂಡು ಹೋಗುತ್ತೀರಾ ? ಊರಿನ ಒಳಗಡೆ ಯಾವುದೇ ರೀತಿಯಾದ ಅನುಕೂಲತೆ ಗಳು ಇಲ್ಲ. ಚರಂಡಿ ಕ್ಲೀನ್ ಮಾಡುವುದು, ಮೋರಿ ಕ್ಲೀನ್ ಮಾಡುವುದು ಇತ್ಯಾದಿ ಕೆಲಸಗಳು ಆಗುತ್ತಾ ಇಲ್ಲ. ತಾವು ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೀರಾ ?